3 ಆದಳಿತಾತ್ಮಕ ಕ್ರಮಗಳು

4 ವೃತ್ತಿಯ ಆಯ್ಕೆಯ ಅವಕಾಶಗಳು

5 ಇ-ಆಡಳಿತ

6 ಪ್ರಕಾರ್ಯಗಳ ಪುನರಾವಲೋಕನ ನಡೆಸಿದ 13 ಇಲಾಖೆಗಳಿಗೆ ಸಂಬಂಧಿಸಿದಂತ ಶಿಫಾರಸ್ಸುಗಳು

7 ನಣ್ಣ ಯೋಜನೆಗಳನ್ನು ವಿಲೀನಗೊಳಿಸುವುದು

8 ಬೇರೆಯವರಿಗೆ ವಹಿಸುವ ಕ್ಷೇತ್ರಗಳು

ಆ ಆಡಳಿತ ಸುಧಾರಣಾ ಆಯೋಗದ ಅಂತಿಮ ವರದಿಯು ಡಿಸೆಂಬರ್ 2001ರಲ್ಲಿ ಸ್ವೀಕೃತವಾಗಿದೆ ಸಿಬ್ಬಂದಿಯನ್ನು ಕಡಿತಗೊಳಿಸುವ ಬಗ್ಗೆ ಈ ತನಕ ಯಾವುದೇ ನಿರ್ಧಾರ ಕೈಗೊಂಡಿಲ್ಲ

ಕರ್ನಾಟಕ ಲೋಕಸೇವಾ ಆಯೋಗದ ವಿಭಾಗೀಯ ಕಛೇರಿಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 14(494)

ಸದಸ್ಯರ ಹೆಸರು ಶ್ರೀ ಜಯಪ್ರಕಾಶ್ ಹೆಗಡೆ ಕೆ (ಬ್ರಹ್ಮವರ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯಮಂತ್ರಿಯವರು)

ಉತ್ತರ

ಅ) ಕರ್ನಾಟಕ ಲೋಕಸೇವಾ ಆಯೋಗದ ವಿಭಾಗೀಯ ಕಛೇರಿಗಳಲ್ಲಿ ಸಿಬ್ಬಂದಿಗನುಗುಣವಾಗಿ ಕೆಲಸಕಾರ್ಯಗಳು ಇವೆಯೆ?

ಇಲ್ಲವಾದಲ್ಲಿ ಅವುಗಳನ್ನು ಮುಂದುವರಿಸುವ ಬಗ್ಗೆ ಸರ್ಕಾರದ ನಿಲುವುಗಳೇನು?

ಆ) ಅನಾವಶ್ಯಕ ಕಛೇರಿಗಳು ಹಾಗೂ ಸಿಬ್ಬಂದಿವರ್ಗ ಎಂದು ಆಡಳಿತ ಸುಧಾರಣಾ ಆಯೋಗದವರು ಶಿಫಾರಸ್ಸು ಮಾಡಿದ ಮೇರೆಗೆ ಅಂಥವುಗಳನ್ನು ರದ್ದುಪಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಉತ್ತರ

ಅ) ಇದೆ

ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ

ಆ) ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳು ಪರಿಶೀಲನೆಯಲ್ಲಿವೆ

ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಗಳ ಕಛೇರಿ ಕಂಪ್ಯೂಟರೀಕರಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 16(503)

ಸದಸ್ಯರ ಹೆಸರು ಶ್ರೀ ಸಭಾಪತಿ ಯು ಆರ್ (ಉಡುಪಿ)

ಉತ್ತರಿಸುವ ಸಚಿವರು ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆ ರಾಜ್ಯ ಸರ್ಕಾರದ ಧೋರಣೆ ಆಗಿದ್ದು ವಿಧಾನ ಸೌಧದಲ್ಲಿರುವ ಮುಖ್ಯ ಮಂತ್ರಿಗಳ ಕಛೇರಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಕಛೇರಿಯನ್ನು ಸಂಪೂರ್ಣವಾಗಿ ಕಂಪ್ಯೂಟರೀಕರಣ ಗೊಳಿಸಲಾಗಿದೆಯೆ? (ವಿವರ ನೀಡುವುದು)

ಉತ್ತರ

ಅ ಮುಖ್ಯ ಮಂತ್ರಿಯವರ ಸಚಿವಾಲಯವನ್ನು ಪೂರ್ಣವಾಗಿ ಕಂಪ್ಯೂಟರೀಕರಣಗೊಳಿಸಲಾಗಿದೆ ಮತ್ತು ಮುಖ್ಯ ಮಂತ್ರಿಯವರ ವಿಳಾಸಕ್ಕೆ ಬರುವ ಎಲ್ಲಾ ಪತ್ರಗಳನ್ನು ಕಂಪ್ಯೂಟರೀಕರಣಗೊಳಿಸುವ ವ್ಯವಸ್ಥೆಯನ್ನು ಅಳವಡಿಸಲಾಗಿದೆ ಇದನ್ನು ಸಂಪೂರ್ಣವಾಗಿ ಲೋಕಲ್ ಏರಿಯಾ ನೆಟ್ ವರ್ಕ್ಸ್ ಸ್ಥಾಪಿಸುವುದರ ಮೂಲಕ ಸಾಧಿಸಲಾಗಿದೆ ಇದಲ್ಲದೆ, ಮುಖ್ಯ ಮಂತ್ರಿಯವರ ಪರಿಹಾರ ನಿಧಿಗೆ ಸಂಬಂಧಪಟ್ಟಂತೆ, ಪತ್ರ ವ್ಯವಹಾರಗಳನ್ನು ತವಾನಣೆಗೆ ಒಳಪಟ್ಟು ಚೆಕ್‌ಗಳನ್ನು ವಿತರಿಸಲು ಕಂಪ್ಯೂಟರೀಕರಣ ಗೊಳಿಸಲಾಗಿದೆ

ಕೆಲವು ಮಾನಿಟರಿಂಗ್ ಸಿಸ್ಟಂಗಳಲ್ಲಿ ಆಯವ್ಯಯ ಭಾಷಣದ ಮೇಲೆ, ಭಾರತ ಸರ್ಕಾರದಲ್ಲಿ ಬಾಕಿ ಇರುವ ಪ್ರಸ್ತಾವನೆಗಳು, ಜಿಲ್ಲೆಗಳಲ್ಲಿ ತೆಗೆದುಕೊಳ್ಳುವ ಕ್ರಮಗಳು